ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/ಚಟುವಟಿಕೆ/05/2017-18

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01
ದಿನಾಂಕ: 25.08.2018

# ಸುತ್ತೋಲೆ

**ವಿಷಯ:** ಪ್ರಕೃತಿ ವಿಕೋಪಕ್ಕೆ ಒಳಗಾದ ಕೊಡಗಿಗೆ ಪುನರ್ ವ್ಯವಸ್ಥೆಗೆ ಸಹಕಾರ ನೀಡುವ ಬಗ್ಗೆ.
**ಉಲ್ಲೇಖ:** ರಾಜ್ಯ ಎನ್ ಎಸ್ ಎಸ್ ಅಧಿಕಾರಿಯವರ ಪತ್ರ ಸಂಖ್ಯೆ: ಯುಸೇಇ/ರಾಸೇಯೋ/2018-19/162 ದಿನಾಂಕ: 21-08-2018

****

ಮೇಲ್ಕಂಡ ವಿಷಯ ಹಾಗೂ ಉಲ್ಲೇಕಕ್ಕೆ ಸಂಬಂಧಿಸಿದಂತೆ ಈಗಾಗಲೇ ರಾಷ್ಟ್ರೀಯ ಸೇವಾ ಯೋಜನೆಯ ಮೂಲಕ ಹಲವು ಸಂಸ್ಥೆಗಳಲ್ಲಿ ಸ್ವಯಂ ಪ್ರೇರಿತರಾಗಿ ಪುನರ್ ವ್ಯವಸ್ಥೆಗೆ ಹಲವು ರೀತಿಯ ಸಹಕಾರಗಳನ್ನು ನೀಡಿದ್ದಾರೆ. ಸಾಂಸ್ಕೃತಿಕವಾಗಿ ಮತ್ತು ಪ್ರಾಕೃತಿಕವಾಗಿ ಕೊಡಗು ಕರ್ನಾಟಕದ ಸಂಸ್ಕೃತಿಗೆ ಹೆಮ್ಮೆಯನ್ನು ತಂದಿದೆ. ಇಂತಹ ಸಂಕಷ್ಟದ ಸಮಯದಲ್ಲಿ ರಾಜ್ಯದ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ತಮ್ಮ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳಿಂದಈ ಕೆಳಗಿನಂತೆ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದಾಗಿರುತ್ತದೆ.

1. ಪುನರ್ ವ್ಯವಸ್ಥೆಗೆ ಸಂಬಂಧಿಸಿದಂತೆ ಪ್ರಾಂಶುಪಾಲರ ಅನುಮತಿ ಪಡೆದು ಕಾರ್ಯಕ್ರಮಾಧಿಕಾರಿಗಳ ನೇತೃತ್ವದಲ್ಲಿಯೇ ಅತ್ಯಂತ ಪಾರದರ್ಶಕವಾಗಿ ನಿಧಿ ಸಂಗ್ರಹ ಮಾಡಬಹುದಾಗಿದೆ. ಸಂಗ್ರಹಿಸಿದ ನಿಧಿಯನ್ನು ಮುಖ್ಯ ಮಂತ್ರಿ ಇವರ ಪರಿಹಾರ ನಿಧಿ ಪ್ರಕೃತಿ ವಿಕೋಪ 2018 ಇದರ ಖಾತೆ ಸಂಖ್ಯೆ 37887098605 (ಐಎಫ್‌ಎಸ್‌ಸಿ ಕೋಡ್ ನಂ.: SBIN0040277, ಎಂಐಸಿಆರ್ ಸಂಖ್ಯೆ: 560002419) ಇಲ್ಲಿಗೆ ಜಮೆ ಮಾಡುವುದು. ಈ ನಿಧಿಗೆ ತೆರಿಗೆ ಕಾಯಿದೆ 80ಜಿ ಅಡಿ ಪೂರ್ಣ ತೆರಿಗೆ ವಿನಾಯಿತಿ ಇದೆ.

2. ಸ್ವಯಂ ಸೇವಕರಿಗೆ ಸ್ವತಂತ್ರವಾಗಿ ನಿಧಿ ಸಂಗ್ರಹಿಸಲು ಅವಕಾಶ ನೀಡಬಾರದು, ನಿಧಿ ಸಂಗ್ರಹಿಸಿ ಮುಖ್ಯ ಮಂತ್ರಿಗಳ ಪರಿಹಾರ ನಿಧಿ ಖಾತೆಗೆ ಜಮಾ ಮಾಡಿರುವ ಬಗ್ಗೆ ನಿರ್ದೇಶನಾಲಯಕ್ಕೆ ಖುದ್ದಾಯವಾಗಿ ಮಾಹಿತಿ ನೀಡುವುದು.

3. ಅಗತ್ಯ ವಸ್ತುಗಳನ್ನು ಸಂಗ್ರಹಿಸಿ ಸಂಬಂಧಿಸಿದ ಜಿಲ್ಲಾಡಳಿತದ ಮೂಲಕ ಕೊಡಗು ಜಿಲ್ಲಾಡಳಿತಕ್ಕೆ ಕಳುಹಿಸಿಕೊಡಬಹುದಾಗಿದೆ.

4. ಪರಿಸ್ಥಿತಿ ಯಥಾಸ್ಥಿತಿಗೆ ಬಂದ ಬಳಿಕ ಹತ್ತಿರದ ಕಾಲೇಜುಗಳು ಪುನರ್ ವ್ಯವಸ್ಥೆ ಮತ್ತು ಶ್ರಮದಾನ ಕಾರ್ಯಕ್ರಮಗಳನ್ನು ಸ್ವಯಂ ಸೇವಕರ ಮೂಲಕ ನಡೆಸಿ. ತಾಂತ್ರಿಕ ಶಿಬಿರಗಳ ಮೂಲಕ ಸಹಕಾರ ನೀಡಬಹುದಾಗಿದೆ. 2018-19ರ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಗಳಲ್ಲಿ ಸಂದರ್ಭಾನುಸಾರವಾಗಿ ಗರಿಷ್ಠ ಕಾರ್ಯಕ್ರಮಗಳನ್ನು ಕೊಡಗಿನಲ್ಲಿ ನಡೆಸಲು ಕ್ರಮ ಕೈಗೊಳ್ಳಬಹುದಾಗಿರುತ್ತದೆ.

ನಿರ್ದೇಶಕರು

ಪ್ರತಿ: 1) ರಾಜ್ಯ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕಾಧಿಕಾರಿಗಳಿಗೆ, ಪ್ರಾಶುಂಪಾಲರ ಮೂಲಕ
2) ಇ-ಗೌರನರ್ಸ್
3) ಕಛೇರಿ ಕಡತಕ್ಕೆ